



ಕಡೆ ಬೆಟ್ಟವನ್ನೇರಿ ಸಾಗುವ ಜೀಪುಗಳ ಅಬ್ಬರ ಜೋರಾಗಿರುತ್ತದೆ. ಹೆದ್ದಾರಿಯಲ್ಲಿ ಸರಕು ಸಾಗಣೆ ವಾಹನ ಭಾರ ಬೆಟ್ಟಗಳನ್ನು ನಡುಗಿಸುತ್ತಿದೆ. ಮಳೆಗಾಲದಲ್ಲಿ ಮೂರು ತಿಂಗಳು ಅಧಿಕ ಭಾರದ ವಾಹನಗಳ ಓಡಾಟಕ್ಕೆ ಜಿಲ್ಲಾಡಳಿತ 'ಬ್ರೇಕ್' ಹಾಕಲು ಆದೇಶ ಹೊರಡಿಸಿದರೂ ಅದು ಆದೇಶದಲ್ಲಿಯಷ್ಟೇ ಉಳಿದು ಬಿಡುತ್ತಿದೆ.

ಮಲೆನಾಡಿನಲ್ಲಿ ಸಹಜ ಅರಣ್ಯವಿರಬೇಕು. ನಮ್ಮ ಪೂರ್ವಜರು ಬೆಳೆಸುತ್ತಿದ್ದ ಕಾಡುಜಾತಿಯ ಮರಗಳು ಕೊಡಗಿನಲ್ಲಿ ಕಾಣೆ ಆಗುತ್ತಿವೆ. ವಾಣಿಜ್ಯ ಉದ್ದೇಶಕ್ಕೆ ಕಾಫಿ ಬೆಳೆಗಾರರು ತೋಟಗಳಲ್ಲಿ ಸಿಲ್ವರ್ ಓಕ್ ಮರಗಳನ್ನು ಹೆಚ್ಚಾಗಿ ಬೆಳೆಸುತ್ತಿದ್ದಾರೆ. ಈ ಬದಲಾವಣೆ ಕೊಡಗಿನ ಪರಿಸರದಲ್ಲಿನ ಸಮತೋಲನ ತಪ್ಪಲು ಕಾರಣವಾಗಿದೆ ಎಂದು 'ಕೂರ್ಗ್ ವೈಲ್ಡ್‌ಲೈಫ್ ಸೊಸೈಟ್' ಸದಸ್ಯರು ಆತಂಕ ವ್ಯಕ್ತಪಡಿಸುತ್ತಾರೆ.